2ನೇದು—ಮತ್ತು ಸದರೀಯವನು ಆ ಲಾಗಾಯತು ತಾನು ವಾಸ ಮಾಡುವ ಡಿಸ್ಟ್ರಿಕ್ಟಿನ ಪೊಲೀಸ್ ಸೂಪರ್‌ಟೆಂಡೆಂಟರವರಿಂದ ನಿಯಮಿಸಲ್ಪಡುವ ಕಾಲದಲ್ಲೂ ವ ಸ್ಥಳದಲ್ಲೂ ತಿಂಗಳಿಗೊಂದಾವರ್ತಿ ಖುದ್ದು ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟರವರ ಅಥವಾ ಆವರು ಮೊಕರರ್ ಮಾಡುವೆಂಥಾ ಇತರ ಆಫಿಸರರ ರೂಬರೂ ಹಾಜರಾಗತಕ್ಕದ್ದು.

3ನೇದು—ಸದರೀಯವನು ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟರವರ ಯಾ ಅವರ ಗೈರ್ ಹಾಜರಿಯಲ್ಲಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರ ಬರಹ ಮೂಲಕವಾದ ಹುಕುಂ ವಿನಹ ಡಿಸ್ಟ್ರಿಕ್ಟನ್ನು ಬಿಡಕೂಡದು.

4ನೇದು—ಸದರೀಯವನು ಯಾವ ಷರತ್ತುಗಳಿಗೆ ಒಳಪಟ್ಟು ಹಾಂಗೆ ಹುಕುಂ ಕೊಡಲ್ಪಡುತ್ತೋ ಅಂಥಾ ಷರತ್ತುಗಳನ್ನ ಒಪ್ಪಿ ಕೊಂಡು ಅವು ಇದರಲ್ಲಿ ಅಡಗಿ ಇದ್ದರೆ ಹ್ಯಾಂಗೋ ಹಾಂಗೆ ಆವುಗಳ ಪ್ರಕಾರ ನಡೆದುಕೊಳ್ಳತಕ್ಕದ್ದು.

5ನೇದು—ಸದರೀಯವನು ಮೈಸೂರು ಸೀಮೆಯಲ್ಲಿ ಜಾರೀ ಯಿರುವ ಯಾವ ಕಾನೂನ್ನಿಂದಾದರೂ ಶಿಕ್ಷಿಸಲ್ಪಡಬಹುದಾದ ಯಾವ ದೊಂದು ತಕ್ಕೀರನ್ನೂ ಮಾಡಕೂಡದು.

6ನೇದು—ಸದರೀಯವನು ಪ್ರಸಿದ್ಧವಾಗಿ ದುರ್ನಡತೆಯುಳ್ಳ ಜನಗಳೊಂದಿಗೆ ಕೀರಕೂಡದು ಅಥವಾ ತಾನೇ ಎಡಬಾಲಿಗೆ ಬೀಳ ಕೂಡದು.

7ನೇದು—ಸದರೀಯವನು ಈ ಷರತ್ತುಗಳನ್ನಾಗಲಿ ಯಿವುಗಳ ವೈಕಿ ಯಾವ ಭಾಗವನ್ನಾಗಲಿ ಉಲ್ಲಂಘಿಸಿದರೆ, ಕೈರ್ಮ ಮಹಾರಾಜಾ ಸರ್ಕಾರದವರು, ಅವನ ದಂಡನೆಯ ಮಾಫೀ ಹುಕುಮನ್ನ ರದ್ದು ಮಾಡಬಹುದು, ತರುವಾಯ ಸದರೀಯವನು ವಾರಂಟ್ ಯಿಲ್ಲದೆ ಯೀ ಯಾವ ಪೊಲೀಸ್ ಆಫಿಸರನಿಂದಾದರೂ ದಸ್ತಗಿರಿ ಮಾಡಲ್ಪಟ್ಟು ಅವನ ಪ್ರಥಮ ಸಜಾವನ್ನ ಅನುಭವಿಸುವ ಬಗ್ಯಾಗಿ ಜೈಲಿಗೆ ದಾಖಲ್ಮಾಡಲ್ಪಡಬಹುದು.

ಮೇಲೆ ಉದಹರಿಸಲ್ಪಟ್ಟ ಖೈದಿಯಾದ ನ ಮಗನಾದ ನಾದ ನಾನು, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 401ನೇ ಸೆಕ್ಷನ್ ಅನುಸರಿಸಿ ಮೇಲಿಕಂಡ ಷರತ್ತುಗಳನ್ನು ಒಪ್ಪಿಕೊಂಡಿರುತ್ತೇನೆ.

ಸಾಕ್ಷಿ.

" ಖೈದಿಯ ರುಜು ಯಾ ಗುರ್ತು.

ವೊಕ್ತಾಂ
ಕಾರೀಖು

ಮೇಲಿಕಂಡ ನು ಗವರ್ನಮೆಂಟ್ ಹುಕುಂ ಅನುಸರಿಸಿ ಮೇಲೆ ನಮೂದಾದ ಷರತ್ತುಗಳ ಮೇಲೆ ಜೈಲ್‌ಖಾನೆಯಿಂದ ಈದಿವಸ ಖುಲಾಸೇ ಮಾಡಲ್ಪಟ್ಟರುತ್ತಾನೆ.

ಕಾರೀಖು ಜೈಲ್ ಸೂಪರ್‌ಟೆಂಡೆಂಟ್.

ಈ ಲೀವ್ ಟಿಕೆಟ್ಟು 188 ನೇ ಇಸವಿ ನೇ ತಾರೀಖಿನ ವರಗೆ ಜಾರಿಯಲ್ಲಿರುತ್ತೆ. ಆ ತರುವಾಯ ಜಾರಿ ಇಲ್ಲ.

ಮೇಲೆ ಕಂಡ ನ ಮಗನಾದ ನು 188 ನೇ ಇಸವಿ ಮಾಹೆ ನೇ ತಾರೀಖಿನಲ್ಲಿ ಅವನ ಹಾಜರಿಯನ್ನು ನನಿಗೆ ರಿಪೋರ್ಟು ಮಾಡಿರುತ್ತಾನೆ.

ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟ್,
ಅಥವಾ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಪೊಲೀಸ್ ಸ್ಟೇಷನಿಗೆ ಮಾಡಿಯಾನಾ ಹಾಜರಿ ರಿಪೋರ್ಟು ಮಾಡಿದ ತಾರೀಖು.

ತಾರೀಖು 13ನೇ ಮಾರ್ಚಿ 1889.

ಕ್ಯಾಂಪ್ ನಂ. 2048.—ಇದರಿಂದ ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಸ್ಟೇಟ್ ರೈಲ್ವೇ ಮಾರ್ಗದಲ್ಲಿ ಬೆಂಗಳೂರಿಗೂ ತುಮಕೂರಿಗೂ ಮಧ್ಯದಲ್ಲಿ ಸ್ಟೇಷನಾಗಿರುವ ಬಾಣಾವರದ ಗ್ರಾಮವು ಈ ಲಾಗಾಯತು "ಚಿಕ್ಕ ಬಾಣಾವಾರ" ವೆಂತಲೂ; ಹೊಳಲ್ಕೆರೆಗೂ ಭೈರನಾಯಕನ ದುರ್ಗಕ್ಕೂ ಮಧ್ಯದಲ್ಲಿ ಸ್ಟೇಷನಾಗಿರುವ ಜಾಜೂರು ಗ್ರಾಮವು "ಚಿಕ್ಕಜಾಜೂರು" ಯಂತಲೂ ಕರೆಯಲ್ಪಡತಕ್ಕದ್ದು.

ಸದರೀ ಹೆಸರುಗಳು ರವಿನ್ಯೂ ಲೆಕ್ಕುಗಳಲ್ಲೂ ಕಾಲ್ಲೂಕು ನಡವಳಿತದ ಕಾಗದ ಪತ್ರಗಳಲ್ಲೂ ಜಾರೀಲಿ ಬರತಕ್ಕದ್ದು.

ನಂ. 1. ತಾರೀಖು 1ನೇ ಏಪ್ರಿಲ್ 1889.

ಸ್ನ 1889ನೇ ಇಸವಿ ಮಾರ್ಚಿ 21ನೇ ಮರ್ತುಮಿನ 2075ನೇ ನಂಬರ್ ಇಸ್ತಿಹಾರಿನೊಂದಿಗೆ ಘಾಯಿಷ್ ಮಾಡೋಣಾದ ಪೋಸ್ಟಲ್ ನೋಟಿಸ್ ವ ಸರ್ಕ್ಯುಲರನ್ನ ರದ್ದುಪಡಿಸಿ, ಮದರಾಸ್ ಪೋಸ್ಟ್‌ಮಾಸ್ಟರ್ ಜನರಲ್ ಯವರಿಂದ ಬಂದಿರುವ ಇದರಡಿ ಕಂಡ ಪೋಸ್ಟಲ್ ನೋಟಿಸ್ ವ ಸರ್ಕ್ಯುಲ್ಲರನ್ನ ಸರ್ವರಿಗೂ ತಿಳಿಯತಕ್ಕ ಬಗ್ಯೆ ಮತ್ತು ಅದರಂತೆ ನಡೆದುಕೊಳ್ಳತಕ್ಕ ಬಗ್ಯೆ ಸಹ ಪ್ರಕಟಿಸೋಣಾಗಿರುತ್ತದೆ.

"ಪೋಸ್ಟಲ್ ನೋಟಿಸ್.

"ಸ್ಯ 1889ನೇ ಇಸವಿ ಏಪ್ರೆಲ್ 1ನೇ ತಾರೀಖು ಲಾಗಾಯತ್ತು, ಮೈಸೂರು ಕೇಮೆಯಲ್ಲಿ ಯಿರುವ ಆಂಚೆ ಆಫಿಸುಗಳು ಇಂಪೀರಿಯಲ್ ಪೋಸ್ಟ್ ಆಫಿಸುಗಳಾಗಿ ಬದಲಾಯಿಸಲ್ಪಡುವವು. ಆ ತಾರೀಖಿನಾರಭ್ಯ ಮೈಸೂರು ಸಂಸ್ಥಾನದಲ್ಲಿರುವ ದರೋಬಸ್ತು ಪೋಸ್ಟ್ ಆಫಿಸುಗಳವರೂ, ಸಾಧಾರಣವಾದ ಪದಾರ್ಥಗಳು, ರಿಜಿಷ್ಟರಾದ ಪದಾರ್ಥಗಳು ವ ಭಾಂಗೀಗಳು ಯಿವುಗಳಿಗೆ ಸಂಬಂಧಿಸಿದ ಕೆಲಸದೊಂದಿಗೆ, ಮಣಿ ಆರಡರ್ ಕೆಲಸವನ್ನೂ ಮತ್ತು ವ್ಯಾಲ್ಯೂಪೇಯಬಿಲ್ ಅಂದರೆ ಖರೀದಿ ವಸೂಲಿಯಿಂದ ಸಾಮಾನು ಪಾವತೀ ಮಾಡತಕ್ಕ ಕೆಲಸವನ್ನೂ ಸಹ ನಡಿಸುವರು.

"2. ದರೋಬಸ್ತು ಪೋಸ್ಟ ಆಫಿಸಿನವರೂ (ಅಂದರೆ ಜಾಜವೀ ಗ್ರಾಮಗಳಲ್ಲಿನ ಚಿಕ್ಕ ಚಿಕ್ಕ ಆಫಿಸುಗಳ ವಿನಹ) ಟಪ್ಪಾಲ್ ಮೂಲಕ ರವಾನೇ ಆಗತಕ್ಕ ಪದಾರ್ಥಗಳಿಗಾಗಿ ಭರವಸೆಯನ್ನು ಕೊಡುವರು; ಯಿದೂ ಅಲ್ಲದೆ ಸೇವಿಂಗ್ಸ್ ಬ್ಯಾಂಕಿನ ಆಡಳಿತಗೆಳನ್ನೂ ನಡಿಸುವರು, ಮತ್ತು ಸಮೀಪ ಠಾಸಲೆಯಲ್ಲಿರುವ ಟಿಲಿಗ್ರಾಫ್ ಆಫಿಸುಗಳಿಗೆ ರವಾನೆ ಬಗ್ಗೆ ಟಿಲಿಗ್ರಾಫ್ ಸಮಾಚಾರಗಳನ್ನೂ ತಿಗದು ಕೊಳ್ಳುವರು.

"3. ಮಣಿ ಆರಡರ್ ಹಣವನ್ನು ಸದರೀ ಇಲಾಖೆಯ ನೌಕರರು ಪಾವತೀದಾರ್ರ ಮನೆಗಳಲ್ಲಿಯೇ ಪಾವತೀ ಮಾಡುವರು.

"4. ಯಿದುವರೆವಿಗೂ ಜಾರೀಯಲ್ಲಿ ಯಿದ್ದಂತಾ ನಗದು ಹಾಸಲಿಗೆ ಬದಲಾಗಿ, ಮೇಲೆಕಂಡ ತಾರೀಖು ಲಾಗಾಯತ್ತು ಇಂಪೀರಿಯಲ್ ಪೋಸ್ಟ್ ಕಾರ್ಡುಗಳು, ಪೋಸ್ಟೇಜ್ ಸ್ಟ್ಯಾಂಪುಗಳು ವ ಮುದ್ರೆಯುಳ್ಳ ಲಿಫಾಫೆಗಳೂ ಜಾರೀಲ್ಲಿ ತರಲ್ಪಡುವವು. ಸಾಧಾರಣ ಪದಾರ್ಥಗಳು ವ ಭಾಂಗಿಗಳು ಇವುಗಳಿಗೋಸ್ಕರ, ಕಳುಹಿಸುವಂತಾವನ ಯಿಷ್ಟಾನುಸಾರ, ಮುಂಚಿತವಾಗಿ ಹಾಸಲ್ ಪಾವತಿಯಾದರೂ ಮಾಡಲ್ಪಡಬಹುದು, ಅಥವಾ ನಟೆವೇಡಾಗಿಯಾದರೂ ಕಳುಹಿಸಲ್ಪಡಬಹುದು.

"5. ಭಾಂಗಿಗಳ ಬಾಬತು ಹಾಸಲು, ಭರವಸೆ ಪಡೆದ ಭಾಂಗೀಗಳಿಗಾಗಿ ಇನ್ಷೂರೆನ್ಸ್ ಫೀ ಮತ್ತು ಮಣಿಆರಡರ್ ಬಾಬತು ಕಮ್ಮಿಷನ್ ಪೊಬಲಾಗು, ಇವುಗಳೆಲ್ಲಾ ನಗದಾಗಿಯೇ ಪಾವತೀ ಮಾಡಲ್ಪಡಬೇಕು.

"6. ಟಪ್ಪಾಲ್ ಹಾಸಲಿನ ದರಗಳು ವ ಇತರ ಫೀಜುಗಳು, ಚಾರ್ಜುಗಳು ಮತ್ತು ತಿಳಿಯಬೇಕಾದ ಸಾಧಾರಣವಾದ ಇತರ ಅಂಕಗಳನ್ನು, ಪ್ರತಿ ಪೋಸ್ಟ್ ಆಫಿಸಿನಲ್ಲಿಯೂ ತಗಲಿ ಹಾಕಲ್ಪಡುವ ನೋಟಿಸ್ ಹಲಿಗೆ ಮೂಲಕ ತಿಳಿದುಕೊಳ್ಳಬಹುದು, ಅಥವಾ ಈ ಸಂಸ್ಥಾನದ ದರೋಬಸ್ತು ಮುಖ್ಯ ಪೋಸ್ಟ್ ಆಫಿಸುಗಳಲ್ಲಿ ಖರೀದಿಗೆ ದೊರೆಯುವ ಪೋಸ್ಟಲ್ ಅಬಿಸ್ಟ್ರಾಕ್ಟ್ ವ ಇಂಡಿಯನ್ ಪೋಸ್ಟಲ್ ಗೈಡ್ ಅಂಬ ಬುಕ್ಕಿನಿಂದಲೂ ತಿಳಿದುಕೊಳ್ಳಬಹುದು.

"ಸರ್ಕ್ಯುಲರ್.

"ಸ್ಯ 1889ನೇ ಇಸವಿ ಏಪ್ರೆಲ್ 1ನೇ ತಾರೀಖು ಲಾಗಾಯತ್ತು, ಮೈಸೂರು ಸರ್ಕಾರದ ಉದ್ಯೋಗಸ್ತರುಗಳಿಂದ ಸದರೀ ಸಂಸ್ಥಾನದೊಳಗಿರುವ ಇಂಪೀರಿಯಲ್ ಪೋಸ್ಟ್ ಆಫಿಸುಗಳ ಮೂಲಕ ಭರವಸೆಪಟ್ಟು ಈ ಸಂಸ್ಥಾನದೊಳಗೇನೇ ಪಾವತಿ ಆಗತಕ್ಕ್ ಬಗ್ಗಾಗಿ ಉದ್ದೇಶಿಸಲ್ಪಡುವಂತಾ ದರೋಬಸ್ತು ಸರ್ಕಾರಿ ಪದಾರ್ಥಗಳೂ ಬಗರ್ ಹಾಸಲ್ ರವಾನಿಸಲ್ಪಡುವವು.

"2. ಬ್ರಿಟಿಷ್ ಕೇಮೆಯೊಳಗೆ ಸಂಪೂರ್ಣವಾಗಿಯಾಗಲಿ ಅಥವಾ ಕೆಲವು ಭಾಸಲೇ ಮಟ್ಟಿಗಾಗಲಿ ರವಾನೇ ಆಗುವಂತಾ ಸರ್ಕಾರೀ ಕಾಗದಪತ್ರಗಳ ಮೇಲೆ ಮಾಮೂಲಿನಂತೆ ಸರ್ಕಾರೀ ರವಾಜಿನ ಹಾಸಲು ಪಾವತಿ ಮಾಡಲ್ಪಡತಕ್ಕದ್ದು. ಆದರೆ ಸರ್ಕಾರೀ ಪೊಸ್ಟೇಜ್ ಲೇಬಿಲ್‌ಗಳನ್ನ ಉಪಯೋಗಿಸುವ ವಿಷಯದಲ್ಲಿ ಆಧಿಕಾರ ಉಂಟಾಗಿರುವ ಮೈಸೂರ್ ಸಂಸ್ಥಾನದ ಉದ್ಯೋಗಸ್ತರುಗಳ ಹುದ್ದೆ ನ ಮೂದು ಇರುವಂತಾ, ಖಾಜೂದಲ್ಲಿ ಕಂಡ, ಈ ಆಫೀನ ಸರ್ಕ್ಯುಲರ್‌ಗಳು ತುರ್ತು ಜಾರಿಯಲ್ಲಿ ಇರತಕ್ಕದ್ದು.

* 1888ನೇ ಇಸವಿ ಜುಲೈ 3ನೇ ಮುಕ್ತಂ ನಂಬರ್ 65ನೇ ಬಾಬತು.
1888ನೇ ಇಸವಿ ಆಗಸ್ಟ್ 17ನೇ ಮುಕ್ತಮಿನ ನಂಬರ್ 101ರ ಬಾಬತು.
ಇದಕ್ಕೆ ಲಗತ್ತಾಗಿರುತ್ತವೆ.

"3 ಮೇಲ್ಕಂಡ 1ನೇ ನಿಬಂಧನೆಯನ್ನನುಸರಿಸಿ ರವಾನಿಸಲ್ಪಡುವ ಸರ್ಕಾರೀ ಪದಾರ್ಥದ ಮೇಲ್ವಿಳಾಸದಲ್ಲಿ "ಮೈಸೂರು ಸರ್ವಾರ್" ಯಂಬದಾಗಿ ಬರಿಯಲ್ಪಡತಕ್ಕದ್ದಲ್ಲದೆ, ರವಾನೆ ಮಾಡುವಂತಾ ಆಫೀಸರನ ಪೂರಾ ರುಜು ಮತ್ತು ಸರ್ಕಾರೀ ಹುದ್ದೆ ಸಹ ನಮೂದಿಸತಕ್ಕದ್ದು. ಅಥವಾ ಹೆಡ್ ಕ್ಲರ್ಕ್ ಯಾ ರವಾನೆ ಕೆಲಸಕ್ಕಾಗಿ ನೇಮಿಸಲ್ಪಡುವ ಇತರ ಉದ್ಯೋಗಸ್ತನ ಪೂರಾ ರುಜು ವ ಹುದ್ದೆ ನಮೂದಿರತಕ್ಕದ್ದು. ಈ ವರತ್ತುಗಳಿಗನುಗುಣವಾಗಿ ರವಾನಿಸಲ್ಪಡುವ ಯಲ್ಲಾ ಪದಾರ್ಥಗಳಿಗೂ ಇಂಡಿಯನ್ ಪೋಸ್ಟಲ್ ಗೈಡಿನ 375ನೇ ಕಲಮಿನಲ್ಲಿ ಕಂಡ ನಿಬಂಧನೆಗಳೂ ಅನ್ವಯಿಸತಕ್ಕದ್ದು. ಪರಂತು ಅವುಗಳಿಗಾಗಿ ಯಾವ ಬಗೆಯಾದ ಟಪ್ಪಾಲ್ ಹಾಸಲು ತೆರಲಿಕ್ಕೂ ಗುರಿಯಾಗಿರುವದಿಲ್ಲವು.

"4. ಯಾವ ಪದಾರ್ಥದ ಮೇಲ್ವಿಳಾಸದಲ್ಲಿಯಾದರೂ ಅಥವಾ ರವಾನೆ ಮಾಡುವ ಉದ್ಯೋಗಸ್ಥನ ಹೆಸರು ವ ಹುದ್ದೆ ಇವುಗಳಲ್ಲಿಯಾದರೂ ಲೋಪವಿದ್ದರೆ ಸದರಿ ಪದಾರ್ಥವು ಸಾಧಾರಣವಾದ ನಟೆವೇಡ್ ಪದಾರ್ಥದಂತೆ ಯೆಣಿಸಲ್ಪಡುವದು. ಪರಂತು ಪಕ್ಷಮ ಕೆಲವು ತಿಂಗಳುಗಳಲ್ಲಿ ಇಂತಾ ಲೋಪಗಳನ್ನ, ರವಾನೆ ಮಾಡುವ ಪೋಸ್ಟಾಫೀನವರು ರವಾನೆಗೆ ಕೊಟ್ಟ ಆಫೀಸರರ ತಿಳುವಳಿಕೆಗೆ ತರತಕ್ಕದ್ದು; ಮತ್ತು ಈ ಬಾಬತು ನಿಬಂಧನೆಯು ಸಂಪೂರ್ಣವಾಗಿ ಮಾಹಿತ್ ಆಗುವ ವರಿವಿಗೂ, ಅಂಥಾ ಪದಾರ್ಥಗಳಮೇಲೆ ಹಾಸಲ್ ವಸೂಲ್ಮಾಡಲ್ಪಡಕೂಡದು."

ಮದರಾಸಿನ ಪೋಸ್ಟ್‌ಮಾಸ್ಟರ ಜನರಲ್‌ಯವರಿಂದ ಕೊಡಲ್ಪಟ್ಟ 1888ನೇ ಇಸವಿ ಜುಲೈ 3ನೇ ಮುಕ್ತಮಿನ 65—52ನೇ ನಂಬರುಳ್ಳ ಸರ್ಕ್ಯುಲರ್ ನಕಲು.

ಬ್ರಿಟಿಷ ರಾಜ್ಯದೊಳಗೆ ಸಂಪೂರ್ಣವಾಗಿಯಾಗಲಿ ಯಾ ಕೆಲವು ಫಾಸಲೆ ಮಟ್ಟಿಗಾಗಲಿ ರವಾನಿಸಲ್ಪಡುವಂತಾ ಸರ್ಕಾರೀ ಕಾಗದ ಪತ್ರಗಳಿಗೋಸ್ಕರ ತಮ್ಮ ತಮ್ಮ ಸ್ವೆ ಮೇಲೆ ಸರ್ಕಾರೀ ಪೋಸ್ಟೇಜ್ ಲೀಬಿಲಿಗಳನ್ನ ಉಪಯೋಗಿಸಲಿಕ್ಕೆ ಅಧಿಕಾರವುಳ್ಳ ಮೈಸೂರು ನೇಟಿವ ಸಂಸ್ಥಾನಕ್ಕೆ ಕೀರಿದ ಅಫೀಸರುಗಳ ಹುದ್ದೆಗಳು ನಮೂದು ಕಂಡ ಈ ಕೆಳಗೆ ಬರುವ ಯರಡು ಪಟ್ಟಿಗಳು ಮದರಾಸ್ ಸರ್ಕಲಿನ ತಮಾಂ ಪೋಸ್ಟಲ್ ಇಲಾಖೆ ಆಫೀಸರ್‌ಗಳ ತಿಳುವಳಿಕೆ ವ ನಡವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತವೆ.

Iನೇ ಪಟ್ಟಿ—ಮೈಸೂರು ಸಂಸ್ಥಾನದ ಸರಹದ್ದಿನೊಳಗೆ ರವಾನೆಗೆ ಕೊಡಲ್ಪಟ್ಟ ಸಂಸ್ಥಾನಕ್ಕೆ ಸಂಬಂಧಿಸಿದ ಸರ್ಕಾರೀ ಕಾಗದಪತ್ರಗಳಿಗೋಸ್ಕರ ಸರವಿಸ್ ಪೋಸ್ಟೇಜ್ ಲೀಬಿಲಿಗಳನ್ನು ಉಪಯೋಗಿಸಲಿಕ್ಕೆ ಅಧಿಕಾರ ಪೊಂಟಾಗಿರುವ ಆಫೀಸರುಗಳ ಹುದ್ದೇ ತಪಶೀಲು—

1. ಶ್ರೀಮನ್ಮಹಾರಾಜ ರಾಜಾ ಸಾಹೇಬ್ ಬಹದೂರವರ ದಿವಾನರವರು.
2. ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಪ್ರೈವೇಟ್ ಸೆಕ್ರಟೇರಿಯವರು.
3. ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸನ್ನಿಧಾನದ ಹಾಜರಿ ದರಬಾರ್ ಬಕ್ಷಿಯವರು.
4. ದಿವಾನರವರ ದರೋಬಸ್ತು ಇಲಾಖೆಯ ಸೆಕರ್‌ಟೇರಿಗಳು ಮತ್ತು ಅಂಡರ್ ಸೆಕರ್‌ಟೇರಿಗಳು.
5. ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಮಂತ್ರಾಲೋಚಕ ಸಭೆಯ ಮೆಂಬರುಗಳು.
6. ಮೈಸೂರು ಸರ್ಕಾರದ ಕಂಟ್ರೋಲರವರು, ಅವರ ಚೀಫ್ ಅಸಿಸ್ಟೆಂಟರು ಮತ್ತು ಮ್ಯಾನೇಜರು ವ ಖಜಾನಾ ಬಕ್ಷೀರು.

ಜುಡೀಷಲ್ ಇಲಾಖಾ.

7. ಚೀಫ್ ಕೋರ್ಟಿನ ಜಡ್ಜಿಗಳು, ರಿಜಿಸ್ಟ್ರಾರ್ರು ವ ಡೆಪ್ಯುಟಿ ರಿಜಿಸ್ಟ್ರಾರ್ರು.
8. ಡಿಸ್ಟ್ರಿಕ್ಟ ವ ಸೆಷನ್ ಜಡ್ಜ್‌ರು ಮತ್ತು ಅವರ ಶಿರಸ್ತೇದಾರ್ರು.
9. ಸಬ್ ಜಡ್ಜಿಗಳು ಮತ್ತು ಅವರ ಶಿರಸ್ತೇದಾರ್ರು.
10. ಮ್ಯುನೀಫರುಗಳು.
11. ಡಿಪ್ಯುಟಿ ವ ಅಸಿಸ್ಟೆಂಟ್ ಕಮ್ಮಿಷನರುಗಳು ಅವರ ಶಿರಸ್ತೇದಾರ್ರು ಮತ್ತು ಹೆಡ್ ರೈಟರು.
12. ಅಮಲ್‌ದಾರರು, ಡೆಪ್ಯುಟಿ ಅಮಲ್‌ದಾರರು ವ ತಾಲ್ಲೂಕು ಶಿರಸ್ತೆದಾರ್ರುಗಳು.

ಪೋಲಿಸ್ ಇಲಾಖಾ.

13. ಇನ್‌ಸ್ಪೆಕ್ಟರ್ ಜನರಲ್‌ರವರು ಮತ್ತು ಪೋಲಿಸ್ ಸೂಪರ್‌ಟೆಂಡೆಂಟರುಗಳು.

ಫಾರೆಸ್ಟ್ ಇಲಾಖಾ.

14. ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ರವರು.
15. ಫಾರೆಸ್ಟ್ ಕನಸರ್‌ವೇಟರ್‌ಗಳು ಮತ್ತು ಅಸಿಸ್ಟೆಂಟ್ ಕನಸರ್‌ವೇಟರುಗಳು.

ಪಬ್ಲಿಕ್‌ವರ್ಕ್ಸ್ ಇಲಾಖಾ.

16. ಅಸಿಸ್ಟೆಂಟ್ ಇಂಜನೀರ್ ವ ಸೂಪರ್‌ವೈಜರ್ ದರ್ಜೆವುಳ್ಳ ಮತ್ತು ಅದಕ್ಕೆ ಮೇಲ್ಪಟ್ಟ ದರ್ಜೆಯ ಪಬ್ಲಿಕ್‌ವರ್ಕ್ಸ್ ಇಲಾಖೆ ಆಫೀಸರುಗಳು.

ಮೆಡಿಕಲ್ ಇಲಾಖಾ.

17. ಅಸಿಸ್ಟೆಂಟ್ ಸರ್ಜನ್ ವ ಅಪಾತಿಕರಿ ದರ್ಜೆವುಳ್ಳ ಮತ್ತು ಅದಕ್ಕೆ ಮೇಲ್ಪಟ್ಟ ದರ್ಜೆಯ ಮೆಡಿಕಲ್ ಆಫೀಸರುಗಳು.
18. ಕೆಮಿಕಲ್ ಯಗ್ಜಾಮಿನರು.

ಮಿಲಿಟೇರಿ ಇಲಾಖಾ.

19. ರಿಸಾಲ್‌ದಾರ್ ದರ್ಜೆ ಮತ್ತು ಅದಕ್ಕೆ ಮೇಲ್ಪಟ್ಟ ದರ್ಜೆಯ ಮಿಲಿಟೇರಿ ಆಫೀಸರುಗಳು.

ಇತರ ಇಲಾಖೆಗಳು.

20. ಗವರ್ನಮೆಂಟ್ ಬೊಟಾನಿಕಲ್ ತೋಟ (ಲಾಲ್‌ಬಾಗ್) ಮತ್ತು ಮ್ಯೂಜಿಯಂ ಸೂಪರ್‌ಟೆಂಡೆಂಡರು.
21. ಪ್ರೊಬೇಷನರ್ ದರ್ಜೆವುಳ್ಳ ಮತ್ತು ಅದಕ್ಕೆ ಮೇಲ್ಪಟ್ಟ ದರ್ಜೆಯ ರೆವಿನ್ಯೂ ವ ಟೊಪೊಗ್ರಾಫಿಕಲ್ ಸರ್ವೆ ಆಫೀಸರುಗಳು

IIನೇ ಪಟ್ಟಿ—ಮೈಸೂರು ಸಂಸ್ಥಾನದ ಸರಹದ್ದಿನ ಆಚೆ ಯಿರುವಂತಾ ಪೋಸ್ಟ್ ಆಫೀಸಿನಲ್ಲಿಯಾದರೂ ಅಥವಾ ಪೋಸ್ಟಾಫೀಸಿಗಾಗಿರಲಿ ಸರ್ಕಾರಿ ಕಾಗದಪತ್ರಗಳನ್ನು ರವಾನೆ ಬ್ಯೆ ಕೊಡಲಿಕ್ಕೆ ಅಧಿಕಾರವುಳ್ಳ ಆಫೀಸರುಗಳ ಹುದ್ದೇ ತಪಶೀಲು.

1. ಶ್ರೀಮ್ಮಹಾರಾಜರಾಜಾಸಾಹೇಬ್ ಬಹದೂರವರ ಪ್ರೈವೆಟ್ ಸೆಕ್ರಟೇರಿ.
2. ಶ್ರೀಮ್ಮಮಹಾರಾಜರಾಜಾ ಸಾಹೇಬುಬಹದೂರವರ ಸನ್ನಿಧಾನದ ಹಾಜರೀ ದರ್ಬಾರ್ ಬಕ್ಷಿಯವರು.
3. ಶ್ರೀಮ್ಮಮಹಾರಾಜರಾಜಾ ಸಾಹೆಬ್ ಬಹದೂರವರ ದಿವಾನರವರು.

4. ದಿವಾನರವರ ದರೋಬಸ್ತು ಇಲಾಖಾ ಸೆಕರೆಟೇರಿ ವ ಅಂಡರ್ ಸೆಕರೆಟೇರಿಗಳು.
5. ಶ್ರೀಮನ್ಮಹಾರಾಜರವರ ಮಂತ್ರಾಲೋಚನ ಸಭೆಯ ಮೆಂಬರುಗಳು.
6. ಮೈಸೂರು ಸೀನುಭ ಪೋಲಿಸ್ ಇನ್‌ಸ್ಪೆಕ್ಟರ್ ಜನರಲ್‌ಯವರು.
7. ದಿವಾನರವರ ಸರ್‌ಕ್ಯೂಟ್ ಆಫೀಸಿನ ಮ್ಯಾನೇಜರು.

83

ಮದರಾಸಿನ ಪೋಸ್ಟ್ ಮಾಸ್ಟರ್ ಜನರಲ್‌ಯವರ ತಾರೀಖು 17ನೇ ಆಗಸ್ಟ್ 1888, ನಂಬರ್ 101—80ವುಳ್ಳ ಸರ್ಕ್ಯುಲರಿನ ನಕಲು

"ಬ್ರಿಟಿಷ್ ರಾಜ್ಯದೊಳಗೆ ಸಂಪೂರ್ಣವಾಗಿಯಾಗಲಿ, ಭು ಕೆಲವು ಭಾಸಲೆ ಮಟ್ಟಿಗಾಗಲಿ ರವಾನಿಸಲ್ಪಡುವಂತಾ ಸರ್ಕಾರಿ ಕಾಗದ ಪತ್ರಗಳಿಗೋಸ್ಕರ ತಮ್ಮ ತಮ್ಮ ಸ್ವೈ ಮೇಲೆ ಸರ್ಕಾರಿ ಪೊಸ್ಟೇಜ್‌ಲೇಬಲ್‌ಗಳನ್ನ ಛಪ ಯೋಗಿಸಲಿಕ್ಕೆ ಇದರ ಬಾಜೂದಲ್ಲಿ ಕಂಡ ಈ ಮೈಸೂರು ಸಂಸ್ಥಾನದ ಆಫಿಸರುಗಳು ಅಧಿಕಾರವುಳ್ಳವರಾಗಿರುತ್ತಾರೆ. ಈ ಆಫಿಸರುಗಳು 1888ನೇ ಇಸವಿ ಜುಲೈ 3ನೇ ಮತ್ತು ಮಿನ 65—52ನೇ ನಂಬರುಳ್ಳ ಈ ಆಫಿಸಿನ ಸರ್ಕ್ಯುಲರೊಳಿಗೆ ಛಾಯಿಷ್ ಮಾಡಲ್ಪಟ್ಟ ಪಟ್ಟಿಗಳ ಕೆಳಗೆ ದಾಖಲ್ಮಾಡಲ್ಪಟ್ಟು, 1ನೇ ಪಟ್ಟಿಗೆ ಲಗತ್ತಾದ್ದೇಂತ ತೋರಿಸಲ್ಪಡತಕ್ಕದ್ದು."

1. ಮೈಸೂರ ಗವರ್ನಮೆಂಟ್ ಪ್ರೆಸ್ ಸೂಪರ್‌ಟೆಂಡೆಂಟ್.
2. ಮೈಸೂರು ಗೆಜಟ್ ಕಂಪೈಲರ್.
3. ಮೈಸೂರು ದಿವಾನರವರ ಹೆಡ್ ಕ್ವಾರ್ಟರ್ ವ ಸರ್‌ಕ್ಯೂಟ್ ಆಫಿಸ್‌ಗಳ ಹೆಡ್ ರೈಟರು

ತಾರೀಖು 11ನೇ ಮಾರ್ಚ 1889.

1870ನೇ ಇಸವಿ10ನೇ ನಂಬರ್ ಲ್ಯಾಂಡ್ ಅಕ್ವಿಜಿಷ್ಷನ್ ಆಕ್ಟು 6ನೇ ಸೆಕ್ಷನಿನ ನಿಯಮಗಳಿಗೆ ಅನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದಕ್ಕೆ ಕೀರಿಸಿ ಇರುವ ಷೆಡ್ಯೂಲ್ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರದ ಕೆಲಸಕ್ಕೆ ಅಂದರೆ (ಆನೆ ಬಂಗಡಿ ಕೆಲಸಕ್ಕೆ) ಹಂಗಾಮಿಯಾಗಿ 1889ನೇ ಏಪ್ರೆಲ್ ಗುರ್ರೇ ಲಾಗಾಯತು ಐದು ವರುಷದ ಮಟ್ಟಿಗೆ ಬೇಕಾಗಿ ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನು ತರಹ ವಿಸ್ತೀರ್ಣ ಮತ್ತು ಕಂದಾಯ.						ಇದರ ಪೈಕಿ ಸರ್ಕಾರದ ಕೆಲಸಕ್ಕೆ ಬೇಕಾದ ಜಮೀನು ವಿಸ್ತೀರ್ಣ ಮತ್ತು ಕಂದಾಯ.						ಷರಾ.
					ತರಹ ನಂಬರ್.	ವಿಸ್ತೀರ್ಣ.			ಕಂದಾಯ.			ತರಹ ನಂಬರ್.	ವಿಸ್ತೀರ್ಣ.			ಕಂದಾಯ.			
						ಏಂ.	ಕೂ.	ಪ.	ರೂ.	ಆ.	ಪೈ.		ಎ.	ಗುಂ.		ರೂ.	ಆ.	ಪೈ.	
ಮೈಸೂರು	ನರಸಿಂಹರಾಜನಗರ	ಹರದನಹಳ್ಳಿ	ದೊಳಿಪುರ	ಸಣ್ಣಮಾದಯ್ಯನವರ ಮಗ ಚಿಕ್ಕಮಾದಯ್ಯನವರು	ಖುಷ್ಕಿ ನಂ. 2	5	17	9	34	3	2	ಖುಷ್ಕಿ ಪೈಕಿ 2	26	12	0	11	9	11	
					ತರೀ ನಂಬರ 3	26	10	7½	129	0	0	ತರೀ 3ನೇ ಪೈಕಿ	57	19	0	107	0	2	
												ಜುಮ್ಲಾ.	83	31	0	118	10	1	

ತಾರೀಖು 26ನೇ ಮಾರ್ಚ 1889.

ಕ್ಯಾಂಪ್ ನಂ. 2209.—ದಿವಾನರವರ ಆಫಿಸಿನಲ್ಲಿ ಕೆಲಸ ನೋಡುತ್ತಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಎಸ್. ವೈದ್ಯನಾಥ ಅಯ್ಯರ್ ಯವರಿಗೆ, 1889ನೇ ಇಸವಿ ಮಾರ್ಚಿ 20ನೇ ಮತ್ತು ಮಿನ 2059ನೇ ನಂಬರುಳ್ಳ ಇಸ್ತಿಹಾರಿನಲ್ಲಿ ಕೊಡೋಣಾದ ರಜಾ, ಸದರೀ ಯವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮುಂದೆ ಬರತಕ್ಕದ್ದು.

ತಾರೀಖು 28ನೇ ಮಾರ್ಚ 1889.

ಕ್ಯಾಂಪ್ ನಂ. 2178.—ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಸೂಪರ್‌ಟೆಂಡೆಂಟ್ ಮೆ॥ ಸಿ. ಈ. ಯಂ. ಸಸ್ಸೆಲ್‌ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಎಗ್ಜಾಮಿನೇಷನ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 29ನೇ ಮಾರ್ಚ 1889.

ಕ್ಯಾಂಪ್ ನಂ. 2231.—ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ವೆ|| ಎಸ್. ವೆಂಕಟರಾಯರಿಗೆ, 2ನೇ ಕ್ಲಾಸ್ ಮೇ ಜಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ಕ್ಯಾಂಪ್ ನಂ. 2233.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 357ನೇ ಸೆಕ್ಷನಿನ ನಿಯಮಗಳನ್ನನುಸರಿಸಿ ಹೊಳೇನರಸೀಪುರದ ತಾ|| ಆಮಲ್ದಾರ್ ವಿ. ಪಾರ್ಥಸಾರಥಯ್ಯಂಗಾರ್ರು ಸಾಕ್ಷಿಗಳ ಕೈಫೀಯತನ್ನು ಕನ್ನಡ ಭಾಷೆಯಲ್ಲಿ ತೆಗದುಕೊಳ್ಳಲಿಕ್ಕೆ ಇದರಿಂದ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ತಾರೀಖು 1ನೇ ಏಪ್ರೆಲ್ 1889.

ನಂ. 2.—ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ಟಿಂಡೆಂಟ್ ವೆ|| ಹೆಚ್. ಹೆಚ್. ಸ್ಪಾರ್ಕ್ಸ್ ಯವರು, ಸ್ಯ 1889ನೇ ಇಸವಿ ಮಾರ್ಚ 8ನೇ ತಾರೀಖಿನಲ್ಲಿ ನಡೆದ ಕೆಳಗಿನ ದರ್ಜೆಯ ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾಪ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಟೆರಿಯವರಿಗೆ ತಮ್ಮ ಕಾರ್ಡಿಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾಪ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಿಮೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್.
ಚೀಫ್ ಸೆಕ್ರಟೆರಿ.

ದಿವಾನರವರು, ಅವರ ಭೇಟಿ ಮಾಡಲಿಚ್ಛೈಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೆ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡ ಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಆದೇ ದಿವಸ ಮಧ್ಯಾನ್ಹಾಪ್ಪರ 3 ಘಂಟೆಗೆ ಬರಬಹುದು.

ಹುಕುಂ ಬಿಮೋಜೀಬ್,
ಕೆ. ಪೊರಸಾಮಿಅಯ್ಯರ್,
ಪ್ರೈವೇಟ್ ಸೆಕ್ರಟೆರಿ.